ದಿನಾಂಕಃ **25-03-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ರವರ ಪರ ಶ್ರೀ ಹೆಚ್ ಟಿ ಎಸ್ ವಕೀಲರಿಂದ,

1) ನಾನು ಮೊದಲನೇ ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ನನಗೆ ಸಾಕ್ಷಿ ನುಡಿಯಲು ಸಮನು ಬಂದಿರುವುದಿಲ್ಲ. ನನಗೆ ಸಾಕ್ಷಿ ನುಡಿಯಲು ವಾದಿಯು ತಿಳಿಸಿರುತ್ತಾರೆ. ನಾನು ವಾದಿ ಪರವಾಗಿ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ನಾನು ಈಗ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. 6 ವರ್ಷಗಳ ಹಿಂದೆ ಬ್ಲೂ ಡಾರ್ಕ ಹೋಟೆಲ್ ನಡೆಸುತ್ತಿದ್ದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ವೃತ್ತಿಯ ಬಗ್ಗೆ ತಿಳಿಸಿರುವುದಿಲ್ಲ.

2) ಪ್ರತಿವಾದಿಗಳು ನನಗೆ ಸುಮಾರು 7-8 ವರ್ಷಗಳಿಂದ ಪರಿಚಯ ಇರುತ್ತಾರೆ. ಪ್ರತಿವಾದಿಗಳ ಕುಟುಂಬಕ್ಕೆ ಎಷ್ಟು ಆಸ್ತಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ ಕುಟುಂಬದ ಸದಸ್ಯರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಯು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ವಾದಿಯಿಂದ ನಾನು ಬಡ್ಡಿಗಾಗಿ ಸಾಲ ಪಡೆದುಕೊಂಡಿರುತ್ತೇನೆ ಮತ್ತು ಪ್ರತಿವಾದಿ 2 ರವರಿಗೂ ಸಹ ಸಾಲ ಕೊಡಿಸಿರುತ್ತೇನೆ. ನಾನು ವಾದಿಗೆ ಸಾಲದ ಭದ್ರತೆಗಾಗಿ ದಾಖಲೆಯನ್ನು ನೀಡಿರುವುದಿಲ್ಲ.

3) ವಾದಿ ಮತ್ತು ಪ್ರತಿವಾದಿ 2 ರವರ ನಡುವೆ ದಿಃ 26/08/2014 ರಂದು ಮಾತುಕತೆ ಆಗಿರುತ್ತದೆ ಆ ಸಮಯದಲ್ಲಿ ನಾನು ವಾದಿಯಿಂದ ಪ್ರತಿವಾದಿ 2 ವರಿಗೆ ಹಣವನ್ನು ಕೊಡಿಸಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರ ನಡುವೆ ಮಾತುಕತೆ ಆದಾಗ ವಾದಿ, ಪ್ರತಿವಾದಿ ಮತ್ತು ನಾನು ಮಾತ್ರ ಇದ್ದೆವು. ವಾದಿ ಮತ್ತು ಪ್ರತಿವಾದಿಗಳ ನಡುವೆ ಮಾತುಕತೆ ಆದಾಗ ನಾನು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ಪ್ರತಿವಾದಿಗಳ ಮನೆಯಲ್ಲಿ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 26/08/2014 ರ 10 ದಿನಗಳ ಹಿಂದೆ ಪ್ರತಿವಾದಿಗಳ ಮನೆಯಲ್ಲಿ

ದಾವಾ ಸ್ವತ್ತಿಗೆ ಸಂಬಂಧಿದಂತೆ ಮಾತುಕತೆ ಆದಾಗ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಫ್ರಾ.ಸಾ1 ರಿಂದ 3 ಮತ್ತು ಪ್ರತಿವಾದಿಗಳು ಹಾಜರಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಸಲುವಾಗಿ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ.

4) ವಾದಿ ಮತ್ತು ಪ್ರತಿವಾದಿಯ ನಡುವ 5,00,000/- ಸಾಲದ ಬಗ್ಗೆ ಯಾವುದೇ ಕರಾರು ಆಗಿರುವುದಿಲ್ಲ. 2 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಕೆಲವು ಬಾರಿ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಅಧಕ್ಷ್ಯರಾಗಿದ್ದರು ಎಂದರೆ ಸರಿ. ನನಗೆ ಕನ್ನಡ ಭಾಷೆ ಓದಲು ಬರುತ್ತದೆ. ನಾನು ಯಾವುದೇ ಎಂದು ದಾಖಲೆ ಸಹಿ ಮಾಡಬೇಕಾದ ಸಮಯದಲ್ಲಿ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ನಿಪಿ-01 ಕರಾರು ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಸಹಿಯನ್ನು ಮಾಡುವ ಸಮಯದಲ್ಲಿ ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಭದ್ರತೆಗಾಗಿ ಮಾಡಲಾಗಿದೆ ಎಂದು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

5) ವಾದಿಗೆ 1 ಛಾಪಾ ಕಾಗದವನ್ನು 2 ಚೆಕ್ಕುಗಳನ್ನು ನೀಡಿರುತ್ತಾರೆ. ಸದರಿ ಚೆಕ್ಕುಗಳ ಸಂಖ್ಯೆಗಳು ಗೊತ್ತಿರುವುದಿಲ್ಲ. ಡಿಸೆಂಬರ್ 2016 ರಲ್ಲಿ ವಾದಿಗೆ 5,00,000/- ಅಸಲು ಮೊತ್ತ ಮತ್ತು 3,00,000/- ಸೇರಿಸಿ ಕೊಟ್ಟಿರುತ್ತಾರೆ. 500 ಮುಖ ಬೆಲೆಯ ಕರೇನ್ಸಿ ನೋಟುಗಳನ್ನು ಕೊಟ್ಟಿರುತ್ತಾರೆ. 2016 ರಲ್ಲಿ ಕೇಂದ್ರ ಸರ್ಕಾರ ಹಳೆ ಕರೇನ್ಸಿ ನೋಟುಗಳನ್ನು ಬದಲಾವಣೆ ಮಾಡಲು ಸೂಚಿಸಿರುವುದರಿಂದ ಅಷ್ಟು ಮೊತ್ತದ ಹಣವನ್ನು ಬ್ಯಾಂಕಿನಿಂದ ಪಡೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಜಯಮ್ಮ ರವರಿಗೆ ಯಾವ ರೀತಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

6) ಪ್ರತಿವಾದಿಗಳು ದಾವಾ ಸ್ವತ್ತನ್ನು ವಾದಿಗೆ ರೂ. 14,50,000/- ಮೊತ್ತಕ್ಕಾಗಿ ಮಾರಾಟ ಮಾಡಲು ಒಪ್ಪಿದ್ದರು ಎಂದರೆ ಸರಿ. ದಿಃ 26/08/2014 ರಂದು ಪ್ರತಿವಾದಿ 1 ಮತ್ತು 2 ರವರು ವಾದಿಯಿಂದ ಮುಂಗಡ ಹಣವಾಗಿ 14,00,000/- ಹಣವನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿ ಹೇಳಿದಂತೆ ನಿಪಿ-01 ಕರಾರು ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ಸ್ನೇಹಿತನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಬಡ್ಡಿ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ತಂದೆ ತೀರಿಕೊಂಡ ನಂತರ ಪ್ರತಿವಾದಿಗಳ ಕುಟುಂಬದ ನಿರ್ವಹಣೆಯನ್ನು ಜಯಮ್ಮ ರವರು ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕುಟುಂಬದ ಸಾಲವನ್ನು ತೀರಿಸುವ ಸಲುವಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ